ಹೆಂಗಸರು ಗೋಳಾಡಿದರು. ರೇವತಿ ದುಃಖದಿಂದ ನೆಲದ ಮೇಲೆ ಉರುಳಾಡಿದಳು.

ದುಃಖತಪ್ತರಾದ ಇಬ್ಬರು ಹೆಂಗಸರು ಮತ್ತು ಅಂಥ ಅನುಭವಸ್ಥನಲ್ಲದ ವಾಸು ಹೇಗೆ ತಾನೆ ಶವಸಂಸ್ಕಾರಕ್ಕೆ ಸಿದ್ಧತೆಗಳನ್ನು ಮಾಡಿಯಾರು? ಹಳ್ಳಿಯ ದೋಬಿ ಬನ ಸೇಥಿ ಐವತ್ತು ಅರವತ್ತು ಶವಗಳ ಸಂಸ್ಕಾರ ಮಾಡಿದವನು. ಒಂದು ಟವಲನ್ನು ಸೊಂಟಕ್ಕೆ ಸುತ್ತಿಕೊಂಡು, ಹೆಗಲಮೇಲೊಂದು ಕೊಡಲಿ ಇಟ್ಟುಕೊಂಡು ಬಂದ ಅವನು ಅವರ ನೆರವಿಗೆ ನಿಂತ. ಬನ ಒಂದು ರೀತಿಯ ವೇದಾಂತಿ ಎನ್ನಬೇಕು. ಕಾಲರಾವೋ ಅಲ್ಲವೋ, ಇವತ್ತೋ ನಾಳೆಯೋ, ನಮ್ಮ ಸಮಯ ಬಂತು ಅಂದರೆ ಇಲ್ಲಿಂದ ಹೊರಡಲೇಬೇಕು. ಮತ್ತೆ ಒಂದು ಜೊತೆ ಹೊಸ ಬಟ್ಟೆಗಳನ್ನು ಯಾಕೆ ಕಳೆದುಕೊಳ್ಳಬೇಕು? ಹಳ್ಳಿಯಲ್ಲಿ ಶ್ಯಾಮಬಂಧು ಅವರದೊಂದೇ ಕರಣಿಕರ ಕುಟುಂಬ. ಆದ್ದರಿಂದ ಯಾರಿಂದಲೂ ನೆರವು ದೊರೆಯದು; ಅದನ್ನು ನಿರೀಕ್ಷಿಸುವಂತೆಯೂ ಇಲ್ಲ. ಇಬ್ಬರು ಹೆಂಗಸರೇ ವಾಸುವಿನ ಜೊತೆ ಶವವನ್ನು ಸ್ಮಶಾನಕ್ಕೆ ಕೊಂಡೊಯ್ದು ಅಂತಿಮ ವಿಧಿಗಳನ್ನು ನೆರವೇರಿಸಬೇಕು.

ಆ ಕಾರ್ಯಗಳೆಲ್ಲ ನೆರವೇರುವ ಹೊತ್ತಿಗೆ ಪೂರ್ವಾಕಾಶದಲ್ಲಿನ್ನೂ ಬೆಳ್ಳಿ ಮಿನುಗುತ್ತಿತ್ತು. ಅವರೆಲ್ಲ ಮನೆಗೆ ಬಂದದ್ದೇ ತಡ, ರೇವತಿಯ ತಾಯಿ ಕಾಲರಾದಿಂದ ಮಲಗಿಬಿಟ್ಟಳು. ಮಧ್ಯಾಹ್ನದ ಹೊತ್ತಿಗೆ ಆಕೆಯ ಸಾವಿನ ಸುದ್ದಿ ಹಳ್ಳಿಯಲ್ಲೆಲ್ಲಾ ಹರಡಿತು.

ದುರ್ವಿಧಿ ವಿಚಿತ್ರ ರೀತಿಯಲ್ಲಿ ವರ್ತಿಸುತ್ತದೆ. ಅದು ಒಬ್ಬನಿಗೆ ಪಲ್ಲಕ್ಕಿಯಲ್ಲಿ ಕೂತು ತಲೆಯ ಮೇಲೆ ರಾಜೋಚಿತ ಛತ್ರಿ ಹಿಡಿಸಿಕೊಳ್ಳುವ ಅದೃಷ್ಟವನ್ನು ಕರುಣಿಸಿದರೆ, ಇನ್ನೊಬ್ಬ ಸಂಕೋಲೆಯಲ್ಲಿರುವ ತನ್ನ ಕೈಗಳ ಮೇಲೆ ಚಡಿಯೇಟು ತಿನ್ನುತ್ತಾನೆ. ಶ್ಯಾಮಬಂಧು ತೀರಿಕೊಂಡ ಮೂರು ತಿಂಗಳೊಳಗೇ ಜಮೀಂದಾರರು ಅವನಲ್ಲಿದ್ದ ಹಸುಗಳನ್ನು ಕಸಿದುಕೊಂಡರು. ಶ್ಯಾಮಬಂಧು ತಾವು ಕಡೆಯ ಬಾರಿ ಸಂಗ್ರಹಿಸಿದ ಗೇಣಿಯನ್ನು ಅವರಿಗೆ ಸಲ್ಲಿಸಿರಲಿಲ್ಲ. ಆದರೆ, ಅದು ನಂಬಲಸಾಧ್ಯವಾದ ಸಂಗತಿ. ಹಣವನ್ನು ಸಲ್ಲಿಸುವುದೊಂದು ಪವಿತ್ರ ಕಾರ್ಯ ಎಂದು ತಿಳಿದಿದ್ದ ಶ್ಯಾಮಬಂಧು ಅವರಿಗೆ ತಾವು ಸಂಗ್ರಹಿಸಿದ ಪ್ರತಿಯೊಂದು ಪೈಸೆಯನ್ನೂ ಜಮೀಂದಾರರ ತಿಜೋರಿಗೆ ಜಮಾ ಮಾಡುವವರೆಗೆ ನಿದ್ದೆ ಬರುತ್ತಿರಲಿಲ್ಲ. ನಿಜವಾದ ಸಂಗತಿಯೆಂದರೆ, ಜಮೀಂದಾರರಿಗೆ ತುಂಬ ದಿನಗಳಿಂದಲೂ ಶ್ಯಾಮಬಂಧುವಿನ ಹಸುಗಳ ಮೇಲೆ ಕಣ್ಣಿತ್ತು. ಅಲ್ಲದೆ ಅವರು ಶ್ಯಾಮಬಂಧುವಿಗೆ ಕೊಟ್ಟಿದ್ದ ಮೂರೂವರೆ ಎಕರೆ ಜಮೀನನ್ನೂ ಹಿಂತೆಗೆದುಕೊಂಡರು. ಆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಆಳಿಗೆ ಏನೂ ಕೆಲಸವಿಲ್ಲದೆ ಹೋಯಿತು. ಅವನು ಡೋಳಾ ಹಬ್ಬದ ಪೌರ್ಣಮಿಯಂದು ಹೊರಟುಹೋದ. ಇದ್ದ ಒಂದು ಜೊತೆ ಎತ್ತುಗಳನ್ನು ಆಗಲೇ ಹದಿನೇಳೂವರೆ ರೂಪಾಯಿಗೆ ಮಾರಿಯಾಗಿತ್ತು. ಶವಸಂಸ್ಕಾರದ ಖರ್ಚುಗಳನ್ನು ಕಳೆದು ಉಳಿದದ್ದರಲ್ಲಿ ರೇವತಿ ಮತ್ತು ಅವಳ ಅಜ್ಜಿ ದಿನ ದೂಡಿದರು. ಆ ನಂತರದ ತಿಂಗಳಲ್ಲಿ ಅವರು ಒಂದು ದಿನ ಕಂಚಿನ ಪಾತ್ರೆ, ಇನ್ನೊಂದು ದಿನ ಒಂದು ತಟ್ಟೆ, ಹೀಗೆ ಮನೆಯ ವಸ್ತುಗಳನ್ನು ಅಡವಿಡತೊಡಗಿದರು.

ವಾಸು ಪ್ರತಿದಿನ ಸಂಜೆ ಅವರ ಮನೆಗೆ ಹೋಗಿ ಮಲಗುವ ಹೊತ್ತಾಗುವವರೆಗೂ ಅಲ್ಲಿಯೇ ಇರುತ್ತಿದ್ದ. ಅವನು ಹಣ ಕೊಟ್ಟರೆ ಅವರು ಅದನ್ನು ಮುಟ್ಟುತ್ತಿರಲಿಲ್ಲ. ಒಂದೆರಡು ಸಲ ಅವನು ಒತ್ತಾಯ ಮಾಡಿ ನೀಡಿದ ನಾಣ್ಯಗಳು ಶೆಲ್ಫಿನಲ್ಲಿಯೇ ಬಿದ್ದಿದ್ದವು. ಮುದುಕಿ ಎಂಟು ಹತ್ತು ದಿನಗಳಿಗೊಮ್ಮೆ ದಿನಸಿ ಸಾಮಾನು ಕೊಳ್ಳುವುದಕ್ಕಾಗಿ ಕೊಡುತ್ತಿದ್ದ ಕೆಲವು ಪೈಸೆಗಳನ್ನು ತೆಗೆದುಕೊಳ್ಳದೆ ಅವನಿಗೆ ಬೇರೆ ದಾರಿಯೇ ಇರಲಿಲ್ಲ. ಮನೆ ಕೂಡ ಬಿದ್ದುಹೋಗುವ ಸ್ಥಿತಿ. ಹುಲ್ಲಿನ ಛಾವಣಿ ತೆಳುವಾಗಿತ್ತು. ವಾಸು ಎಷ್ಟೇ ಪ್ರಯತ್ನಿಸಿದರೂ ಅದಕ್ಕೆ ಮತ್ತೆ ಹುಲ್ಲು ಹೊದಿಸಲಾಗಲಿಲ್ಲ. ಅವನು ಸ್ವತಃ ಎರಡು ರೂಪಾಯಿ ಖರ್ಚು ಮಾಡಿ ತಂದ ಹುಲ್ಲಿನ ಹೊರೆಗಳು ಹಿತ್ತಿಲಲ್ಲಿ ಕೊಳೆಯುತ್ತ ಬಿದ್ದಿದ್ದವು.